International Journal of Kannada Research 2023; 9(4): 37-41




International Journal of Kannada Research
www.kannadajournal.com

**ISSN: 2454–5813**
IJKR 2023; 9(4): 37-41
© 2023 IJKR
www.kannadajournal.com
Received: 13-07-2023
Accepted: 18-09-2023

**ಗಿರೀಶ ಕೆ.ಎನ್**
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ
ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಗಿರೀಶ ಕೆ.ಎನ್**
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ
ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು, ಕರ್ನಾಟಕ, ಭಾರತ

# ಕುವೆಂಪು ಸಾಹಿತ್ಯ: ಕನ್ನಡ ಮತ್ತು ಕರ್ನಾಟಕ ಚಿಂತನೆಗಳು

**ಗಿರೀಶ ಕೆ.ಎನ್**

**ಪೀಠಿಕೆ**

ಇಂದು ಕನ್ನಡಿಗರೆಲ್ಲರೂ ಸಂತಸ ಪಡುವ ಸಮಯ. ಕಡೆಗೂ ಕನ್ನಡ ಜನಕೋಟಿಯ ಹೊಂಗನಸು ನನಸಾಗಿದೆ. ಇಂದಿಗೆ ಕರ್ನಾಟಕಕ್ಕೆ ಕರ್ನಾಟಕ ಎಂಬ ನಾಮಕರಣವಾಗಿ ಐವತ್ತು ವರ್ಷಗಳಾಯಿತು. ಯಾವುದು ಚಿರಕಾಲದಿಂದ ಒಂದು ಮಂತ್ರವಾಗಿತ್ತೋ ಅದು ಇಂದು ತಂತ್ರವಾಗಿಯೂ ಸಾರ್ಥಕತೆಯನ್ನು ಆರ್ಜಿಸಿಕೊಂಡಿದೆ. ನವೆಂಬರ್ ೧, ೧೯೭೩ ರಂದು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣಗೊಂಡಿತು. ಅಂದು ಕನ್ನಡಿಗರ ತನು, ಮನ ತಣಿದ ಸುದಿನ. ಕರ್ನಾಟಕ ಏಕೀಕರಣಕ್ಕಾಗಿ, ನಾಮಕರಣಕ್ಕಾಗಿ ಹಾರೈಸಿದವರು, ಹೋರಾಡಿ ದುಡಿದವರು ರಾಜಕಾರಣಿಗಳಿಗಿಂತ ಕವಿಗಳು ಮತ್ತು ಸಾಹಿತಿಗಳು. ಕರ್ನಾಟಕತ್ವ ಮುಖ್ಯವಾಗಿ ಅವರ ವಿಜಯವಾಗಿದೆ. ಈ ವಿಜಯೋತ್ಸವದ ನಾಯಕತ್ವ ವಹಿಸಿದ ಸಾವಿರಾರು ಮಹನೀಯರಲ್ಲಿ ರಾಷ್ಟ್ರಕವಿ ಕುವೆಂಪು ಅವರ ಪಾತ್ರ ಅತ್ಯಂತ ಹಿರಿದು. ೧೯೪೧ರ ಕಾಲದಿಂದಲೂ ಕುವೆಂಪು ಸಾಂಸ್ಕೃತಿಕ ಕರ್ನಾಟಕಕ್ಕಾಗಿ ತಮ್ಮ ಬದುಕನ್ನೆ ಮುಡಿಪಿಟ್ಟರು. ಇದು ೧೯೭೩ರಲ್ಲಿ ಶ್ರೀ.ಡಿ.ದೇವರಾಜ ಅರಸು ರವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ನೆರವೇರಿತು. ತಮ್ಮ ಸಾಹಿತ್ಯದುದ್ದಕ್ಕೂ ಕನ್ನಡ ತನವನ್ನೆ ಮೆರೆದಿರು ದಿಟ್ಟ ಕವಿ ಕುವೆಂಪು.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಹೊಸ ರೂಪವನ್ನು ಕೊಟ್ಟು, ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಮಹಿಳಾ ಚಿಂತನೆಗೆ ಒಳಪಡುವ ವಸ್ತು ಆಶಯಗಳು ಇವರ ಸಾಹಿತ್ಯದಲ್ಲಿ ಬೇರೂರಿವೆ. ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ, ಮನುಜಮತ–ವಿಶ್ವಪಥ ಈ ಪಂಚಮಂತ್ರಗಳು ಇವರ ಸಾಹಿತ್ಯದ ಜೀವಾಳ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. ಅವರ ಒಂದೊಂದು ಕೃತಿಗಳು ಅನರ್ಘ್ಯ ರತ್ನಗಳು. ಒಂದೊಂದು ಕೃತಿಯಲ್ಲಿಯೂ ಆಯಾಯ ಪ್ರದೇಶ, ಪರಿಸರ, ಸಂದರ್ಭ, ಸನ್ನಿವೇಶಗಳು, ಪಾತ್ರಗಳು ಹೊಸಲೋಕವನ್ನೇ ಸೃಷ್ಟಿಸಿವೆ. 'ಅನಿಕೇತನ' ಕವನ ವಿಶ್ವಮಾನವ ಗೀತೆಯಾಗಿ, 'ನೇಗಿಲಯೋಗಿ' ಜಗತ್ತಿಗೆ ಅನ್ನ ನೀಡುವ ರೈತನ ಬಗ್ಗೆ ಬರೆದಿರುವುದು ರೈತಗೀತೆಯಾಗಿ, 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ನಾಡಗೀತೆಯಾಗಿ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವಾಗಿ ನಾಡಿನ ಸಾಹಿತ್ಯ ಸಹೃದಯರ ವೇದಿಕೆಯಲ್ಲಿ ಸಂಗಮಿಸಿವೆ. 'ಶ್ರೀ ಸಾಮಾನ್ಯವೆ ಭಗವನ್ ಮಾನ್ಯಂ; ಶ್ರೀ ಸಾಮಾನ್ಯನೆ ಭಗವದ್ ಧನ್ಯಂ' ಎಂದು ಹೇಳಿ ಸಾಮಾನ್ಯನಿಗೆ ಹಾಗೂ ಶೂದ್ರರಿಗೆ ಮಾನ್ಯತೆ ದೊರೆತದ್ದು ಮತ್ತು ಶ್ರೀಮಂತವಾದದ್ದು ಕುವೆಂಪು ಸಾಹಿತ್ಯದಿಂದಲೇ. ಕುವೆಂಪು ಸಾಹಿತ್ಯದಲ್ಲಿ ವಿಶ್ವಮಾನವ ಸಂದೇಶ, ಸಾಮಾಜಿಕತೆ, ಅಧ್ಯಾತ್ಮ, ಪ್ರಕೃತಿ, ವೈಚಾರಿಕತೆ, ವೈಜ್ಞಾನಿಕತೆ, ಸ್ತ್ರೀ ಸಂವೇದನೆ, ದಲಿತ ಸಂವೇದನೆ, ರೈತ ಸಂವೇದನೆ, ರಾಷ್ಟ್ರ ಮತ್ತು ಕನ್ನಡ ನಾಡಿನಾಭಿಮಾನ– ಹೀಗೆ ಇತರೆ ಹಲವಾರು ವಸ್ತು ಆಶಯಗಳು ಮಡುಗಟ್ಟಿವೆ.

ಗತಕಾಲದ ಕನ್ನಡನಾಡಿನ ಸ್ಥಿತಿಯನ್ನು ನಲವತ್ತು ವರ್ಷಗಳ ಹಿಂದೆಯೇ ರಚಿಸಿದ ಕವಿತೆಯೊಂದು ಆ ಸಮಯದ ನಾಡಿನ ದೀನ ಸ್ಥಿತಿಯನ್ನು ಅತ್ಯಂತ ಶೋಚನೀಯವಾಗಿ ನೋವಿನಿಂದ ವರ್ಣಿಸುವ ಪರಿ ನಾಡಿನ ಜನತೆಗೆ ಎಚ್ಚರಿಕೆಯನ್ನು ನೀಡುವ ಜೊತೆಗೆ ಭಾಷೆಯ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ತಿಳಿಸುತ್ತಾರೆ.

ಸಾಯುತಿದೆ ನಿಮ್ಮ ನುಡಿ, ಓ ಕನ್ನಡ ಕಂದರಿರ,
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ!
ರಾಜನುಡಿಯೆಂದೊಂದು, ರಾಷ್ಟ್ರನುಡಿಯೆಂದೊಂದು,
ದೇವನುಡಿಯೆಂದೊಂದು ಹತ್ತಿ ಜಗ್ಗಿ

ನಿರಿನಿಟಿಲು ನಿಟಿಲೆಂದು ಮುದಿಮೂಳೆ ಮುರಿಯುತಿದೆ,
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ !
ಕೂಗಿಕೊಳ್ಳಲು ಕೂಡ ಬಲವಿಲ್ಲ, ಮಕ್ಕಳೇ
ಬಾಯ್ಮುಚ್ಚಿ ಹಿಡಿದಿಹರು ಕೆಲರು ನುಗ್ಗಿ.

ನಾಡಿನಲ್ಲಿ ಈ ಹಿಂದೆ ಇದ್ದ ಪರಿಸ್ಥಿತಿಯನ್ನು ಚಿತ್ರಿಸುವ ಸಾಲುಗಳು ಕನ್ನಡಿಗರ ಮನಸ್ಸನ್ನು ಕೆರಳಿಸುವ ಮತ್ತು ಎಚ್ಚೆತ್ತುಕೊಳ್ಳುವ ಸನ್ನಿವೇಶವನ್ನು ವ್ಯಕ್ತಪಡಿಸುತ್ತವೆ. ಆದರೆ ರಾಜ ನುಡಿ ಮತ್ತು ರಾಷ್ಟ್ರ ನುಡಿಗಳು ಇಂದಿಗೂ ಕೂಡ ತಮ್ಮ ಅಧಿಪತ್ಯವನ್ನು ಸಾಧಿಸುತ್ತಲೇ ಬಂದಿವೆ. ಕನ್ನಡದ ಭದ್ರಕೋಟೆಯನ್ನು ಭೇದಿಸಲು ಇವತ್ತಿಗೂ ಕೂಡ ಹವಣಿಸುತ್ತಲೇ ಇರುವುದು ಶೋಚನೀಯ ಸಂಗತಿ.

ನಿಮ್ಮ ನುಡಿ ನಿಮ್ಮ ಗಂಡಸುತನಕೆ ಹಿರಿ ಸಾಕ್ಷಿ;
ಗೆಲವಿದ್ದರದಕೆ ನಿಮಗಿಹುದು ಶಕ್ತಿ.
ನುಡಿದುಡಿದರೆಲ್ಲರೂ ಮೂಕ ಜಂತುಗಳಂತೆ;
ಬಾಲವಲ್ಲಾಡಿಪುದೆ ಪರಮಭಕ್ತಿ!

ಇಂದು ಕರ್ನಾಟಕ ಘನ ಸರ್ಕಾರ 'ಹೆಸರಾಗಲಿ ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಘೋಷ ವಾಕ್ಯವನ್ನು ನೀಡಿದೆ. ಅದರಂತೆ ನಾವೆಲ್ಲರೂ ನಮ್ಮ ಮನೆ ಮನಗಳಲ್ಲಿ ಕನ್ನಡವನ್ನು ಬಳಸುವ ಮೂಲಕ ಭಾಷೆಯನ್ನು ಉಳಿಸಬೇಕಾಗಿದೆ. ಭಾಷೆ ನಾಶವಾದರೆ ಅಲ್ಲಿ ಸಂಸ್ಕೃತಿಯು ಸಹ ನಾಶ ಹೊಂದುತ್ತದೆ. ಭಾಷೆಗೇಡಿ ದೇಶಗೇಡಿಯಾಗುತ್ತಾನೆ ಎಂಬುದು ಕುವೆಂಪುರವರ ಅಭಿಪ್ರಾಯ.

ಕನ್ನಡಿಗರಿಗೆ ಧೈರ್ಯ ತುಂಬುವ ಕುವೆಂಪು ಅವರು:
ಪಂಪರನ್ನರ್ ಕುಮಾರವ್ಯಾಸ ಲಕ್ಷ್ಮೀಶ
ಹರಿಹರಾದಿಗಳುಸಿರು ನಮ್ಮೊಳಿರ್ಪನ್ನೆಗಂ
ಅಳುಕದೀ ಕನ್ನಡಂ! ಎಂದಿದ್ದಾರೆ.

ಆದರೆ ಇಂದಿನ ಯುವಜನತೆಗೆ ಪಂಪ ರನ್ನ ಕುಮಾರವ್ಯಾಸ ಎಂದು ಹೇಳಿದರೆ ಇವರ‍್ಯಾರು ಎಂದು ಕೇಳುವ ವರ್ಗವಿದೆ. ಪ್ರಸ್ತುತದ ದಿನಮಾನಗಳಲ್ಲಿ ಕನ್ನಡ ಓದುವ ಯುವ ಜನತೆಯ ಸಂಖ್ಯೆ ತೀರವಿರಳವಾಗಿದೆ ಎಂದು ಹೇಳಿದರೆ ಆಶ್ಚರ್ಯವಾಗದು. ಹಾಗಾಗಿ ಕುವೆಂಪು ಕನಸಿನ ಕರ್ನಾಟಕವನ್ನು ಕಟ್ಟುವ ಕಾರ್ಯ ಯುವ ಜನತೆಯದ್ದಾಗಿದೆ. ಇನ್ನೂ ಮುಂದೆಯಾದರು ಎಚ್ಚೆತ್ತು ಕನ್ನಡ ಕಟ್ಟುವ ಕೆಲಸದಲ್ಲಿ ತೊಡಗಬೇಕಿದೆ.
ಪಂಪನ್ನನೋದುವ ನಾಲಿಗೆ, ಕುಮಾರವ್ಯಾಸನಾಲಿಪ ಕಿವಿ ಆಂಡಿಸ್ ಪರ್ವತವನ್ನೇರಿದರೂ ಅದು ಸಹ್ಯಾದ್ರಿ, ಮಿಸಿಸಿಪಿ ಹೊಳೆಯ ನೀರನ್ನು ಕುಡಿದರು ಅದು ಕಾವೇರಿ ಎಂದು ಹೇಳುವ ಕುವೆಂಪು ಅವರು ಕನ್ನಡಿಗ ಎಲ್ಲಿ ಹೋದರೂ ತನ್ನ ಕನ್ನಡತನವನ್ನು ಉಳಿಸಿಕೊಂಡು, ತಮ್ಮ ಆತ್ಮಗೌರವವನ್ನು ಉಳಿಸಿಕೋಳ್ಳಬೇಕು. ಇಲ್ಲವಾದರೆ ಆತ್ಮಹಾನಿ ನಿಶ್ಚಿತ. ಹಾಗಾಗಿ,

ಎಲ್ಲಾದರೂ ಇರು ಎಂತಾದರು ಇರು
ಎಂದೆದಿಗು ನೀ ಕನ್ನಡವಾಗಿರು.
ಕನ್ನಡ ಗೋವಿನ ಓ ಮುದ್ದಿನ ಕರು
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು!

ಅಲ್ಲದೆ 'ಕನ್ನಡಕ್ಕೆ ಹೋರಾಡು ಕನ್ನಡದ ಕಂದ' ಎನ್ನುವಂಥಹ ಕನ್ನಡಮ್ಮನ ಬಯಕೆಯನ್ನು ಕನ್ನಡಿಗರ ಮನಮುಟ್ಟುವಂತೆ ಭಾವುಕತೆಯಿಂದ ವ್ಯಕ್ತಪಡಿಸಿದ್ದಾರೆ. ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮವಾಗಬೇಕು. ಪ್ರಾದೇಶಿಕ ಭಾಷೆಗಳ ಮೇಲೆ ಯಾವುದೇ ಭಾಷೆಯನ್ನು ಬಲಾತ್ಕಾರವಾಗಿ ಹೇರಬಾರದು. ಅದು ಏಕಮೇವ ಶಿಕ್ಷಣ ಹಾಗೂ ಆಡಳಿತ ಮಾಧ್ಯಮವಾಗಬೇಕು. ತಮ್ಮ ಈ ಆಲೋಚನೆಯಿಂದ ಶ್ರೀಸಾಮನ್ಯರಿಗೆ, ಮಕ್ಕಳಿಗೆ ಮತ್ತು ನಾಡಿಗೆ ಒಳಿತಾಗಲೆಂಬ ದೃಷ್ಟಿಯಿಂದ ಹಲವಾರು ಭಾಷಣ, ಲೇಖನಗಳ ಮೂಲಕ ಅದು ತಮ್ಮ ಕರ್ತವ್ಯವೆಂಬಂತೆ ಪ್ರಚಾರ ಮಾಡಿದ್ದಾರೆ. ಇವರ ಈ ದೃಢ ನಿರ್ಧಾರದ ಬಹುವಿಧದ ಪ್ರಚಾರದಿಂದ ಮಾನವೀಯ ನೆಲೆಯಲ್ಲಿ ಮಾನವತಾ ನಿಷ್ಠೆಯಿದೆಯೆಂಬದನ್ನು ಜಗತ್ತು ತಿಳಿಯಬೇಕಾಗಿದೆ.
'ಇಂಗಿ ಹೋಗುತಿದೆ ಇಂಗ್ಲಿಷಿನ ಮರುಭೂಮಿಯಲಿ ನಿಮ್ಮ ಮಕ್ಕಳ ಶಕ್ತಿ–ಬುದ್ಧಿ–ಪ್ರತಿಭಾ' ಬಲಾತ್ಕಾರಕ್ಕಾಗಿ ಮಾತ್ರವೆ ಹೊರತು ಈ ರೋಷ, ಭಾಷೆಗಾಗಿಯೇ ನಮ್ಮ ದ್ವೇಷವೇನಿಲ್ಲ ಎಂದು ಕವಿಗಳು ಇಂಗ್ಲಿಷಿನ ಅಮಲೇರಿ ಬುದ್ಧಿ ಭ್ರಮಣೆಯಿಂದ ವಸ್ತುಸ್ಥಿತಿಯನ್ನು ಮರೆತಿರುವ ಮೂರ್ಖರ ಮುಂದೆ, ಕಿವುಡರ ಮುಂದೆ ಮತ್ತು ದು:ಖಿತರ ಚೀತ್ಕಾರ ಕೇಳಿಸದ ಕಿವುಡರ ಮುಂದೆ ನಿಜದ ನಕಾಶೆಯನ್ನು ಬಿಚ್ಚಿಡುತ್ತಾರೆ.

ಇಂಗ್ಲಿಷಿನ ಜಿಲೋಟಿನ್ನಿನಡಿ ನಿಮ್ಮ ಕೊರಳೊಡ್ಡಿ
ವರುಷ ವರುಷ ಕೋಟಿ ಕೊಲೆಯಪ್ಪಿರೇಕೆ?
ನಿಮ್ಮ ಶಕ್ತಿಯ ಕುಂದದಲ್ಲ ಕಾರಣ ಕೊಲೆಗೆ;
ಪರಭಾಷೆ ಚಪ್ಪಡಿ! ಪರೀಕ್ಷೆಯ ನೆವಂ ಬೇಕೆ!
ಏಳು ಎಚ್ಚರಗೊಳ್ಳು ಓ ಭಾರತೀಯ ಕಂದ.
ನಿನ್ನ ಸ್ವತಂತ್ರ್ಯವನ್ನು ನೀನೆ ರಕ್ಷಿಸಿಕೊ!

ಇನ್ನು ಮುಂದೆ ಇಂಗ್ಲಿಷ್ ಹಲವರು ಕಲಿಯುವ ಭಾಷೆಯಲ್ಲ. ಕೆಲವರು ಕಲಿಯಬೇಕಾದ ಭಾಷೆ. ಹಲವರಿಗೆ ಕೊಂಚಮಟ್ಟಿಗೆ ಬೇಕು. ಕೆಲವರಿಗೆ ಮಾತ್ರ ಚೆನ್ನಾಗಿ ಬೇಕು. ಇಂಗ್ಲಿಷ್ ಕಲಿಯುವವರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು. ಭಾಷಾ ದೃಷ್ಟಿಯಿಂದ ಕಲಿಯುವವರು, ಸಾಹಿತ್ಯ ದೃಷ್ಟಿಯಿಂದ ಕಲಿಯುವವರು. ಸಾಹಿತ್ಯ ದೃಷ್ಟಿಯಿಂದ ಕಲಿಯುವವರಿಗೆ ಇಂಗ್ಲೀಷಿನ ಪರಿಚಯ ಚೆನ್ನಾಗಿ ಆಗಬೇಕು. ಅವರು ಚೆನ್ನಾಗಿ ಓದಲೂ ಬರೆಯಲೂ ಮಾತನಾಡಲೂ ಭಾಷಣ ಮಾಡಲು ಬಲ್ಲವರಾಗಬೇಕು. ಉಳಿದವರಿಗೆ ಇಂಗ್ಲೀಷಿನ ಸಾಮಾನ್ಯ ಪರಿಚಯವಿದ್ದರಷ್ಟೆ ಸಾಕು ಎಂದಿದ್ದಾರೆ.
ದೇಶ ಭಾಷೆಗೆ ಪ್ರಥಮ ಸ್ಥಾನ ಸಲ್ಲಬೇಕು. ದೇಶ ಭಾಷೆ ಶಿಕ್ಷಣವಾಗಬೇಕು ಎಂದಿದ್ದಾರೆ. ನಾನೇನೂ ಇಂಗ್ಲಿಷ್ ಭಾಷೆಯ ದ್ವೇಷಿಯಲ್ಲ. ಕನ್ನಡದ ಹತ್ತು ಪಟ್ಟು ಇಂಗ್ಲಿಷ್ ಗ್ರಂಥಗಳನ್ನು ಓದಿದ್ದೇನೆ. 'ಇಂಗ್ಲಿಷಿನ ಉಕ್ಕಿನ ಬಲೆಯನಿಕ್ಕಿ ಜಾತಿಯಲಿ, ಹಣದಲಿ ಅಂತೆ ಅಧಿಕಾದಲಿ ಮೇಲೆ ಕುಳಿತವರೆಲ್ಲರೂ ಮೆರೆಯುತಿಹರು ಸೊಕ್ಕಿ'! ಎಂದು ಈ ನಾಡಿನ ಶೋಷಕರ ಸ್ವಾರ್ಥಪರ ಹೀನಬುದ್ಧಿಯನ್ನು ವಿವರಿಸುತ್ತಾರೆ.
ಕುವೆಂಪು ಅವರು ಕಟುವಾಗಿ ಟೀಕಿಸಿದ ವಿಷಯವೆಂದರೆ ತ್ರಿಭಾಷಾ ಸೂತ್ರ. ಇದು ಅನಾವಶ್ಯಕ. ಈ ಮೂರು ಭಾಷೆಗಳಲ್ಲಿ ಪ್ರಾಂತ ಭಾಷೆ ಸೇರದೆ ಹೋಗುವ ಅಪಾಯವುಂಟು. ಈಗ ಇಂಗ್ಲಿಷ್ ಒಂದೇ ಬಲಾತ್ಕಾರದ್ದಾಗಿ ಅರ್ಧ ಪ್ರಾಣ ಹೋಗಿದೆ. ತ್ರಿ ಭಾಷಾ ಸೂತ್ರದಂತೆ ಹಿಂದಿಯೂ ಕಡ್ಡಾಯವಾಗಿ ಪೂರ್ತಿ ಪ್ರಾಣವಾಗಿದೆ. ಇದು ಅನ್ಯಾಯ. ಕುವೆಂಪು ಅವರು ಈ ವಿಚಾರಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್ ಬಲಿಷ್ಠ ಭಾಷೆ ಅದರ ಕಾಲನ್ನು ಮುರಿದು ಆಳಾಗಿರಿಸುಕೊಳ್ಳಿ. ಹೇಳಿದ ಕೆಲಸನ್ನು ಮಾಡಿಕೊಂಡು ಬಿದ್ದಿರುತ್ತದೆ. ಹಿಂದಿಗೆ ಸ್ವಾತಂತ್ರ್ಯ ಕೊಡುವುದರ ಬದಲು ಅದರ ಸೊಂಟ

ಮುರಿಯಿರಿ. ಅದರಿಂದ ನಮಗೆ ಯಾವ ಅಪಾಯವಿಲ್ಲ. ಒಬ್ಬ ಕುಂಟ, ಒಬ್ಬ ಹೆಳವ, ಅವು ನಮ್ಮ ಮೈ ಮೇಲೆ ಬೀಳುವುದಿಲ್ಲ ಎಂದು ಹೇಳುವ ಮೂಲಕ ಎರಡೇ ಭಾಷೆಗಳು ಸಾಕು ಮೂರನೆಯದರ ಬದಲಿಗೆ ಮಾನವಿಕ ಹಾಗೂ ವೈಜ್ಞಾನಿಕ ವಿಷಯಗಳನ್ನು ಕಲಿಯಬೇಕೇಂಬುದು ಕುವೆಂಪು ಅವರ ಅಭಿಮತ.

ಭಾಷಾತ್ರಿಶೂಲವೀ ತ್ರಿಭಾಷಾಸೂತ್ರ;
ಬಾಲಕರ ರಕ್ಷಿಸೈ, ಹೇ ತ್ರಿಣೇತ್ರ!
ಮುಂದೆ ದಿಳ್ಳಿಯ ಮಂತ್ರಿಯಾಗುವವ ನೀನೊ?
ಬೇಡವೆಂಬುವರಾರು? ಹಿಂದಿಯನು ಕಲಿಯೊ!
ಬದುಕಿ ಇಲ್ಲಿಯೆ ಬಾಳಿ ಸಾಯುವ ನಾನೊ!
ನಿನ್ನ ಸೂತ್ರಕೆ ಏಕೆ ನನ್ನ ಬಲಿಯೊ
ಮುಂದೆ ಇಂಗ್ಲೆಂಡಿನಲಿ ನೀ ರಾಯಭಾರಿ?
ಬೇಡವೆಂಬುವರಾರು?
ಹೊಡೆಬಿರಿಯೆ ಕುಡಿಯೊ ಇಂಗ್ಲಿಷಿನ ಹೆಂಡ ಹೀರಿ
ನನ್ನ ಮೇಲೆತಕ್ಕೆ ಮಾಡುವೆ ಬಲಾತ್ಕಾರ ಸವಾರಿ?

ಶೈಕ್ಷಣಿಕ ದೃಷ್ಟಿಯಿಂದ ಮಾತ್ರವಲ್ಲದೆ ರಾಜಕೀಯ ದೃಷ್ಟಿಯಿಂದಲೂ ಈ 'ಬಹುಭಾಷೆಗಳಲ್ಲಿ ದ್ವಿಭಾಷಾ' ಸೂತ್ರ ತ್ರಿಭಾಷಾಕ್ಕಿಂತ ಪರಿಣಾಮಕಾರಿಯಾಗಿ, ಎಲ್ಲ ಪ್ರದೇಶಗಳಿಗೂ ಸಮಾಧಾನವೊದಗಿಸಿ, ಸ್ವಭಾಷಾಭಿಮಾನ ಜನ್ಯವಾದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುತ್ತದೆ. ಇಂದು ಇಂಗ್ಲಿಷಿನ ಸ್ಥಾನದಲ್ಲಿ ಹಿಂದಿಯನ್ನು ತಂದು ಕೂರಿಸಬೇಕೆಂಬುದು ಹಿಂದಿವಾದಿಗಳ ಸಂಚು. ಇದನ್ನು ಕನ್ನಡಿಗರು ಪ್ರತಿಭಟಿಸಿ ವಿಫಲಗೊಳಿಸಬೇಕು. ಕೇಂದ್ರ ಸರ್ಕಾರವನ್ನು ಮೆಚ್ಚಿಸಲಿಕ್ಕೆ ರಾಜ್ಯ ಸರ್ಕಾರ ಹಿಂದಿ ವಿಶ್ವವಿದ್ಯಾನಿಲಯ ಸ್ಥಾಪನೆಯಂತಹ ಅವಿವೇಕದ ಕಾರ್ಯಗಳಿಗೆ ಕೈಹಾಕಿ ಕನ್ನಡಿಗರ ಹಿತವನ್ನು ಹಾಳುಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಹೆಜ್ಜೆ–ಹೆಜ್ಜೆಗೂ ಎಚ್ಚರವಿರಬೇಕು.

ಕುವೆಂಪು ಅವರು ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕ ಏಕೀಕರಣವಾಗಬೇಕೇಂದು, ಕನ್ನಡಿಗರೆಲ್ಲರೂ ಒಂದಾಗಿ ಬಾಳಬೇಕೆಂದು ಹೋದೆಡೆಯಲೆಲ್ಲ ಭಾಷಣದ ಮೂಲಕ ಜನರನ್ನು ಪ್ರಚೋದಿಸುತ್ತಿದ್ದರು. ಅಲ್ಲದೇ ತಮ್ಮ ಭೇಟಿಗೆ ಬಂದ ಜನರ ಕಿವಿಯಲ್ಲಿ ಕರ್ನಾಟಕದ ಮಂತ್ರವನ್ನು ಪಠಿಸುತ್ತಿದ್ದರು. ೧೯೪೧ ರಲ್ಲಿಯೇ 'ಏಕೈಕ ಕರ್ನಾಟಕ'ದ ಕನಸು ನನಸಾಗುತಿದೆ ಎಂದು ಆವೇಳೆಗಾಗಲೇ ಹಾಡಿದರು. ಕುವೆಂಪು ರಾಜಕೀಯ ನಾಯಕರಂತೆ ಪ್ರಚಾರ ಪ್ರೀಯರಲ್ಲ, ಬೀದಿ ಚಳವಳಿಗಾರರು ಅಲ್ಲ, ಅವರು ಗುಪ್ತ ಚಳವಳಿಗಾರರು. ಇವರ ಈ ಹೋರಾಟಕ್ಕೆ ಸಾಕಷ್ಟು ವಿರೋಧವಿದ್ದರೂ ಕೂಡ ಕುವೆಂಪು ಮಾತ್ರ ತಮ್ಮ ಗುಪ್ತ ಚಳವಳಿಯನ್ನು ನಿಲ್ಲಿಸಲಿಲ್ಲ. ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಮಾತ್ರವಲ್ಲದೆ ಐತಿಹಾಸಿಕ ದೃಷ್ಟಿಯಿಂದಲೂ ಏಕೀಕರಣದ ಸಾಧನೆ ನಿಸರ್ಗ ಸಹಜವಾದ ಹಕ್ಕೆಂಬುದು ಅವರ ವಾದ. ಅದರಲ್ಲೂ ಕುವೆಂಪು ಅವರು ಬಯಸುವುದು ಸಾಂಸ್ಕೃತಿಕ ಕರ್ನಾಟಕವೇ ಹೊರತು ಬೇರೆಯಲ್ಲ.

ಆಗಿನ ಮೈಸೂರು ಸರ್ಕಾರ ಏಕೀಕರಣ ಚಳುವಳಿ ರಾಜಕೀಯ ವಿಚಾರವಾದ್ದರಿಂದ, ಆ ಬಗ್ಗೆ ಸರ್ಕಾರಿ ನೌಕರರು ಭಾಷಣ ಮಾಡಕೂಡದೆಂದೂ, ಮಾಡಿದರೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಕುವೆಂಪು ಅವರಿಗೆ ಎಚ್ಚರಿಕೆ ನೀಡಿತ್ತು. ಆ ಎಚ್ಚರಿಕೆಗೆ ಕುವೆಂಪು ಅವರು ಹೆದರಲಿಲ್ಲ ಬದಲಾಗಿ ಅವರ ಪ್ರತಿಕ್ರಿಯೆ 'ಅಖಂಡ ಕರ್ನಾಟಕ'ವೆಂಬ ಕವನದ ಮೂಲಕ ಹೊರ ಹೊಮ್ಮಿ ಈಡೀ ಕನ್ನಡ ನಾಡನ್ನೇ ಬಡಿದೆಬ್ಬಿಸಿತು. ಈ ಕವಿತೆ ಹಿಂದಿನ ಭಾಷಣಗಳಿಗಿಂತ ಪ್ರಚೋದನಾತ್ಮಕವಾಗಿ ಪರಿಣಾಮಕಾರಿಯಾಗಿತ್ತು. ಕರ್ನಾಟಕ ತುಂಬೆಲ್ಲ ಅವರದ್ದೆ ಮಾತು. ತರುಣರ ಬಾಯಲ್ಲಿ ಆ ಕವಿತೆಯ ಸಾಲುಗಳೇ ನಲಿದಾಡುತ್ತಿದ್ದವು.

**ಅಖಂಡ ಕರ್ನಾಟಕ**

ಅಲ್ತೋ ನಮ್ಮ ಬೂಟಾಟದ ರಾಜಕೀಯ ನಾಟಕ!
ಇಂದು ಬಂದು ನಾಳೆ ಸಂದು
ಹೋಹ ಸಚಿವ ಮಂಡಲ
ರಚಿಸುವೊಂದು ಕೃತಕವಲ್ತೋ
ಸಿರಿಗನ್ನಡ ಸರಸ್ವತಿಯ
ವಜ್ರ ಕರ್ಣಕುಂಡಲ!

ಅಖಂಡ ಕರ್ನಾಟಕವನ್ನು ಸರಸ್ವತಿಯೆ ರಚಿಸಿದ, ನೃಪತುಂಗ ಚಕ್ರವರ್ತಿಯನ್ನೂ, ಪಂಪ ಬಸವೇಶ್ವರ ನಾರಯಣಪ್ಪಾದಿ ಮಂತ್ರಿಗಳನ್ನೂ ಒಳಗೊಂಡ ನಿತ್ಯ ಸಚಿವ ಮಂಡಲವಿದೆ. ಅಖಂಡ ಕರ್ನಾಟಕವೆಂಬುದು ಬರಿಯ ನಾಟಕವಲ್ಲ, ಬರಿಯ ಹೊಟ್ಟೆ ಬಟ್ಟೆಗಳ, ಪಕ್ಷ ಜಾತಿಯ ಕಲಹವಲ್ಲವೆಂದು ಅವರು ಅಪ್ಪಳಿಸುತ್ತಾರೆ. ಸಂಸ್ಕೃತಿಯ ಅಭ್ಯುದಯಕ್ಕಾಗಿ ಸರಸ್ವತಿಯೆ ರಚಿಸಿದೊಂದು ರಾಜಕೀಯ ತ್ರೋಟಕವೆಂಬುದು ಮಂತ್ರಿಗಳಿಗೆ ಅರ್ಥವಾಗುತ್ತದೆ ಎಂದು ಅಣಕಿಸುತ್ತಾರೆ. ಹಾಗೆಯೇ ಕರ್ನಾಟಕ ಎಂಬ "ಹೆಸರಲ್ಲೇನಿದೆ"? ಎಂದು ಯಾರಾದರೂ ಕೇಳಿದರೆ ನಾನು ಹೇಳುತ್ತೇನೆ ಹೆಸರಲ್ಲಿ ಎಲ್ಲವೂ ಇದೆ ಎಂದು. ಇವರೆ ಒಮ್ಮೆ ಮಾನಸ ಗಂಗೋತ್ರಿಯನ್ನು ಪ್ರಾರಂಭಿಸುವಾಗ 'ಇಟ್ಟ ಹೆಸರು ಕೊಟ್ಟ ಮಂತ್ರ' ಎಂದು ಹೇಳಿದ್ದು ನಿಜಕ್ಕೂ ಸಂತಸದ ಸಂಗತಿಯಾಗಿದೆ.

ಕರ್ನಾಟಕ ಎಂಬುದೇನು
ಹೆಸರೆ ಬರಿಯೆ ಮಣ್ಣಿಗೆ?
ಮಂತ್ರ ಕಣಾ! ಶಕ್ತಿ ಕಣಾ!
ತಾಯಿ ಕಣಾ! ದೇವಿ ಕಣಾ!
ಬೆಂಕಿ ಕಣಾ! ಸಿಡಿಲು ಕಣಾ!

ಎಂದು ಗರ್ಜಿಸುತ್ತಾರೆ. ಆ ಗರ್ಜನೆ ಅಂದಿನ ಹಠಾರ ಕಚೇರಿಯನ್ನೇ ಅಲುಗಾಡಿಸುತ್ತದೆ, ಮಂತ್ರಿಗಳ ಆಸನಗಳನ್ನು ನಡುಗಿಸಿತ್ತು. ಹೀಗೆ ಒಂದಲ್ಲ ಒಂದು ಬಗೆಯಲ್ಲಿ ಕರ್ನಾಟಕದ ಅಸ್ಮಿತೆಗಾಗಿ ತಮ್ಮನ್ನೆ ತಾವು ಮುಡಿಪಾಗಿಸಿಕೊಂಡವರು ಕುವೆಂಪು.

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ 'ಏಕೀಕರಣಕ್ಕೆ ಇದು ಸಕಾಲವಲ್ಲ' ಎಂಬ ನಿರ್ಣಯ ಅಂಗೀಕೃತವಾದಾಗ ಯಾರೊ ಸಭೀಕರು ಕುವೆಂಪು ಅವರ 'ಅಂಖಡ ಕರ್ನಾಟಕದ'ದ ಕಡೆಗೆ ಮುಖ್ಯಮಂತ್ರಿಗಳ ಗಮನಸೆಳೆಯುತ್ತಾರೆ. 'ಅವರು ಬೆಂಕಿ, ಬೆಂಕಿ. ಅವರ ವಿಷಯವನ್ನೆತ್ತುವುದೇ ಬೇಡ ಎಂದು ಮುಖ್ಯಮಂತ್ರಿಗಳು ಉತ್ತರ ನೀಡಿದಾಗ ಕುವೆಂಪು ಅವರು ಪ್ರಜಾಪ್ರತಿನಿಧಿ ಸಭೆಯ ತೀರ್ಮಾನದ ಪರಿಣಾಮವಾಗಿ ಮೂಡಿದ ಕವಿತೆಯೇ 'ಕರ್ನಾಟಕ ಮಂತ್ರ ದೀಕ್ಷೆ' ....

ದೀಕ್ಷೆಯ ತೊಡು ಇಂದೇ!
ಕಂಕಣ ಕಟ್ಟಿಂದೇ!
ಕನ್ನಡ ನಾಡೊಂದೇ!
ಇನ್ನೆಂದೂ ತಾನೊಂದೇ!
ಇಡು ನಿನ್ನಯ ಸತಿಯಾಣೆ!
ಇಡು ನಿನ್ನಯ ಪತಿಯಾಣೆ!
ಮಕ್ಕಳ ಮೇಲಾಣೆ!...

ಎನ್ನುವ ಧ್ಯೆಯ ಮಂತ್ರವನ್ನು ಸಮಸ್ತ ಕನ್ನಡ ನಾಡಿನ ಜನತೆಗೆ ಬೋಧಿಸುತ್ತಾರೆ. ಅಖಂಡ ಕರ್ನಾಟಕಕ್ಕಾಗಿ ಕುವೆಂಪು ಅವರ ಶ್ರಮ ನಿಜಕ್ಕೂ ಅತ್ಯಮೂಲ್ಯವಾದದ್ದು, ಬೆಲೆಕಟ್ಟಲಾಗದ್ದು.

ಕುವೆಂಪು ಅವರು ತಮ್ಮ ಅಲೋಚನೆಗಳಿಗೆ ಸರಿಯಾಗಿ ಯಾರು ಸ್ಪಂದಿಸಲಿಲ್ಲವಾದರೂ ಅವರು ಎಂದೂ ಸುಮ್ಮನೆ ಕೂತವರಲ್ಲ. ಅಖಂಡ ಕನ್ನಡನಾಡಿಗಾಗಿ ಒಂದಲ್ಲ ಒಂದು ಬಗೆಯಲ್ಲಿ ತಮ್ಮ ಕೆಲಸವನ್ನು ಮಾಡಿದವರು ಕುವೆಂಪು. ಅದರಂತೆ ಅವರ ಬದುಕಿನ ಮತ್ತೊಂದು ಮರೆಯಲಾಗದ ಹೋರಾಟವೆಂದರೆ ೧೯೫೬ ನೆಯ ನವೆಂಬರ್ ಒಂದರಂದು ಕರ್ಣಾಟಕ ರಾಜ್ಯೋದಯವಾಗುತ್ತದೆ. ಆ ಸಮಯದಲ್ಲಿ ಕುವೆಂಪು ಅವರು 'ಕರ್ಣಾಟಕ ರಾಜ್ಯೋದಯ ಶ್ರೀಗೀತೆ' ಯನ್ನು ರಚಿಸುತ್ತಾರೆ. ಅಲ್ಲಿ 'ಓ ತಾಯೆ, ಭಾರತೀಯೆ, ನಿನ್ನ ಮಗಳನು ಹರಸಿ ಹಾಡು ಓ ಶಾಂತಿಯಂ' ಎಂದು ಪ್ರಾರ್ಥಿಸುತ್ತಾರೆ.

ಬರಿಯ ಚದರ ಮೈಲಿಗಳಲ್ತು ಕರ್ಣಾಟಕ ದೇಶ ವಿಸ್ತೀರ್ಣಂ;
ನೆನೆ, ನೆನೆ ಮನೋಮಯದ ಸಂಸ್ಕೃತಿ ಕೋಶ ವಿಸ್ತೀರ್ಣಮಂ
ಮರೆಯದಿರು ಚದರ ಸಂವತ್ಸರದ ಶತಮನಗಳ
ಕಾಲವಿಸ್ತೀರ್ಣಮಂ
ಪ್ರಾಣಮಯ ಭಾವಪ್ರದೇಶ ವಿಸ್ತೀರ್ಣಮಂ
ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ

ಇಲ್ಲಿ ಎಲ್ಲಿಯೂ ಕುವೆಂಪು ಅವರು ಮೈಸೂರು ಎಂಬ ಹೆಸರನ್ನು ಬಳಸಿಲ್ಲ. ಅಲ್ಲಿಯೂ ಕುವೆಂಪು ಅವರು ಎತ್ತಿಹಿಡಿದಿರುವುದು ಸಂಸ್ಕೃತಿನಿಷ್ಠ ಕರ್ಣಾಟಕ ತತ್ವವನ್ನೆ ಹೊರತು ಬೇರೆಯಾವುದನ್ನು ಅಲ್ಲ.

ಭಾಷಾವಾರು ಪ್ರಾಂತರಚನೆಯಾಗಿ, ಕನ್ನಡನಾಡು ಒಂದಾದರು, ಅದಕ್ಕೆ ಕರ್ನಾಟಕವೆಂಬ ಹೆಸರು ಕೂಡಿಬರದುದ್ದಕ್ಕಾಗಿ ಅವರು ತುಂಬ ಬೇಸರವನ್ನು ವ್ಯಕ್ತಪಡಿಸುತ್ತಾರೆ. ಆ ಸಮಯದಲ್ಲಿ ಕುವೆಂಪು ಅವರು ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಅದೇನೆಂದರೆ ಕರ್ನಾಟಕಕ್ಕೆ ಕರ್ನಾಟಕ ಎಂದು ನಾಮಕರಣವಾಗುವ ತನಕ ನನಗೆ ಯಾವುದೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಬೇಡ, ಯಾವ ವಿಶ್ವವಿದ್ಯಾನಿಲಯದ ಗೌರವ ಪದವಿಯೂ ಬೇಡ ಎಂದು ಬಯಸಿಬಂದ ಎಲ್ಲವನ್ನು ತಿರಸ್ಕರಿಸುತ್ತಾರೆ. ಇದೇ ಸಮಯದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಡಿ.ಸಿ. ಪಾವಟೆಯವರೇ ಕುವೆಂಪು ನಿವಾಸವಾದ ಉದಯರವಿಗೆ ಬಂದು, ವಿಶ್ವವಿದ್ಯಾನಿಲಯ ನೀಡುವ ಗೌರವವನ್ನು ಸ್ವೀಕರಿಸಬೇಕೆಂದು ಕೇಳಿಕೊಂಡಾಗ, ನಾಲ್ಕು ಮುಖ್ಯವಾದ ಅಂಶಗಳನ್ನು ಹೇಳುತ್ತಾರೆ. ಅದರಲ್ಲೊಂದು ಒಟ್ಟುಗೂಡಿದ ನಾಡಿನ ಹೆಸರು ಅಧಿಕೃತವಾಗಿ ಕರ್ನಾಟಕ ಎಂದಾಗಬೇಕು ಎಂಬುದಾಗಿತ್ತು.

ಇಷ್ಟೆಲ್ಲ ಸತತ ಪ್ರಯತ್ನ ಮಾಡಿದರು ಕುವೆಂಪು ಬಯಕೆ ಈಡೇರಲಿಲ್ಲ. ಆದರೂ ಧೃತಿಗೆಡದೆ ತಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮುಂದುವರೆಸುತ್ತಲೇ ಬಂದರು. ಕನ್ನಡ ನಾಡು ಒಂದಾಗುತ್ತಿದ್ದಂತೆ ಕನ್ನಡ ಭಾಷೆಗೆ ಉಚಿತ ಸ್ಥಾನ ಲಭಿಸುತ್ತದೆ, ಜನಮನದಲ್ಲಿ ಭಾವೈಕ್ಯತೆ ಮೂಡುತ್ತದೆ, ಎಲ್ಲರ ಪ್ರಯತ್ನದಿಂದ ಸ್ವರ್ಗ ಸಂಪತ್ತೆ ಭೂಮಿಗಿಳಿದು ಬರುತ್ತದೆ ಎಂದು ಕುವೆಂಪು ಅವರು ಸಂತೋಷವಾಗಿದ್ದರು. ಇದರ ನಡುವೆಯು ಕನ್ನಡಿಗರಲ್ಲಿ ಅಲಸಿಕೆ, ಅನೈಕ್ಯ, ದ್ವೇಷ, ಮತ್ಸರ ಮತ್ತು ವಿರಸಗಳು ಮಾನವತೆಯ ಕಪ್ಪು ಚುಕ್ಕೆಗಳೆಂದು ಅರಿತವರಾದ ಕುವೆಂಪು ಅವರು 'ಕನ್ನಡ ಡಿಂಡಿಮ'ವನ್ನು ಬಾರಿಸುವಂತೆ ಭಗವಂತನನ್ನು ಪ್ರಾರ್ಥಿಸುತ್ತಾರೆ.

ಸತ್ತಂತಿಹರನು ಬಡಿದೆಚ್ಚರಿಸು;
ಕಚ್ಚಾಡುವವರನು ಕೂಡಿಸಿ ಒಲಿಸು,
ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು;
ಒಟ್ಟಿಗೆ ಬಾಳುವ ತೆರದಲಿ ಹರಸು!

ಈ ಕವಿತೆಯ ಒಂದೊಂದು ಸಾಲಿನಲ್ಲೂ ಕನ್ನಡಿಗರನ್ನು ಒಂದುಗೂಡಿಸುವ ಹರ ಸಾಹಸವಿದೆ, ಸಂಕಟವಿದೆ, ಸಹಾನುಭೂತಿಯಿದೆ, ಅನುಕಂಪೆಯಿದೆ, ನಾಡ ಭವ್ಯ ಭವಿಷ್ಯದ ಬಗೆಗಿನ ಕಾತರತೆ ಕಾಳಜಿಗಳಿವೆ. ಅಂತಿಮವಾಗಿ 'ಮೂಡಲಿ ಮಂಗಳ ಮತಿಮತಿಯಲ್ಲಿ; ಸರ್ವೋದಯವಾಗಲಿ ಸರ್ವರಲಿ' ಎನ್ನುವ ಕುವೆಂಪು ಅವರ ಪ್ರಾರ್ಥನೆ ಭಗವಂತನಿಗೆ ತಲುಪಿದ್ದು ನವೆಂಬರ್ ೧, ೧೯೭೩ ರಂದು ಇದು ಇಂದಿಗೆ ೫೦ ವರ್ಷಗಳು ಸಂದಿರುಹುದು ಪ್ರತಿಯೊಬ್ಬ ಕನ್ನಡಿಗನಿಗೂ ಹರ್ಷದಾಯಕ ವಿಚಾರವಾಗಿದೆ.

ನಮ್ಮ ನಾಡಿಗೆ ಕರ್ನಾಟಕ ಎಂದು ನಾಮಕರಣವಾಗಿ ಐವತ್ತು ವರ್ಷಗಳೆನೋ ಸಂದಿವೆ ಆದರೆ ಕನ್ನಡನಾಡಿನ ಪರಿಸ್ಥಿತಿ ಮೊದಲಿಗಿಂತಲೂ ಹದಗೆಟ್ಟಿರುವುದನ್ನು ಗಮನಿಸಬಹುದಾಗಿದೆ. ಇಂದು ಕನ್ನಡಿಗರೆಲ್ಲರೂ ಮತ್ತೆ ಎಚ್ಚೆತ್ತುಕೊಂಡು ನಮ್ಮ ಹೆಮ್ಮೆಯ ಸಾಂಸ್ಕೃತಿಕ ನಾಡನ್ನು ಉಳಿಸಿಕೊಳ್ಳುವ ಗುರುತರುವಾದ ಜವಬ್ದಾರಿ ಪ್ರತಿಯೊಬ್ಬ ಕನ್ನಡಿಗನದ್ದಾಗಿದೆ. ಹಾಗಾಗಿ ಕೊನೆಯದಾಗಿ ಕುವೆಂಪು ಅವರೆ ಹೇಳಿರುವ ಕಳಕಳಿಯ ಮೊರೆಯನ್ನು ಸ್ಮರಿಸುತ್ತೇನೆ ಬಯಸುತ್ತೇನೆ. " ಹೇ ರಾಜಕರಣಿ, ಹೇ ಮಂತ್ರಿವರೇಣ್ಯ, ಹೇ ಅಧಿಕಾರಿ ಸರ್ವೋತ್ತಮ, ಹೇ ವಣಗ್ವರ, ಹೇ ಶ್ರಮಜೀವಿ, ಹೇ ಅಧ್ಯಾಪಕ ಮಹಾಶಯ, ಓ ನೇಗಿಲಯೋಗಿ, ನೀನು ಯಾರೆ ಆಗಿರು, ಎಲ್ಲಿಯೆ ಇರು, ಕನ್ನಡವನ್ನು ಕೈ ಬಿಡದಿರು. ಇದು ನಿನ್ನ ಭಾಷೆ, ಇದು ದೇಶ ಭಾಷೆ, ಇದು ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯದ ಭಾಷೆ. ಇದು ಮಹಾಕವಿಗಳನ್ನು ಹಡೆದಿರುವ ಭಾಷೆ. ನಿನ್ನ ತಾಯಿ ರಾಣಿಯಾಗಿದ್ದಾಳೆಂಬುದನ್ನು ಮರೆತು ಬಿಡುವೆಯಾ? ಸ್ವತಂತ್ರವಾದ ಮೇಲೆಯೂ ಆಕೆಯನ್ನು ತೊತ್ತಾಗಿರಿಸುವೆಯಾ? ಎಂಬ ಮಾತನ್ನು ಮತ್ತೆ ನಾವೆಲ್ಲರೂ ನೆನಪಿಸಿಕೊಂಡು ನಾಡಿನ ರಕ್ಷಣೆಗೆ ಮುಂದಾಗಬೇಕಿದೆ. ಕೇವಲ ನವೆಂಬರ್ ೧ ರಂದು ರಾಜ್ಯೋತ್ಸವವನ್ನು ಆಚರಿಸಿ, ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಭಾಷಣ ಮಾಡಿದರಷ್ಟೆ ಸಾಲದು ಅದು ಪ್ರತಿದಿನದ ಉತ್ಸವವಾಗಬೇಕು, ಅದು ನಮ್ಮ ಮನೆ ಮನದ ಆಚರಣೆಯಾಗಬೇಕು. ಇಲ್ಲವಾದರೆ ನಮ್ಮನ್ನು ಎಚ್ಚರಿಸಲು ಇಲ್ಯಾರು ಕುವೆಂಪು ತರಹದ ಭಾಷಾಭಿಮಾನಿ ಇಲ್ಲ. ನಾಡಿನ ವಿಚಾರವಾಗಿ ಪ್ರತಿಯೊಬ್ಬ ಕನ್ನಡಿಗನೂ ಕುವೆಂಪು ಆಗಬೇಕಿದೆ.

ಕೊನೆಯದಾಗಿ ಪ್ರತಿಯೊಬ್ಬ ಕನ್ನಡಿಗನಿಗೂ ಕವಿ ಕೊಟ್ಟಿರುವ ಕನ್ನಡದ ದೀಕ್ಷೆಯನ್ನು ಇಂದು ನಾವೆಲ್ಲರೂ ತೊಡಬೇಕಿದೆ. ಅದೇನೆಂದರೆ ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ. ಕನ್ನಡಕ್ಕಾಗಿ ಕಿರು ಬೆರಳೆತ್ತಿದರೂ ಸಾಕು, ಇಂದು ಅದೆ ಗೋವರ್ಧನಗಿರಿಯಾಗುತ್ತದೆ.ಇಂದು ನಾವೆಲ್ಲರೂ ಕರ್ನಾಟಕ ಐವತ್ತರ ಸಂಭ್ರಮದಲ್ಲಿದ್ದೇವೆ. ಈ ಸಂಭ್ರಮದ ಜೊತೆಯಲ್ಲೆ ನಾಡಿಗೆ ಬಂದೊದಗಬಹುದಾದ ಸಮಸ್ಯೆಗಳ ಬಗ್ಗೆ ಕನ್ನಡಿಗರಿಗೆ ಅರಿವು ಮೂಡಿಸಿ ನಮ್ಮ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ರಕ್ಷಣೆಗೆ ನಾವೆಲ್ಲರೂ ದುಡಿಯೋಣ. ಕನ್ನಡವೇ ಸತ್ಯ, ಕನ್ನಡವೇ ನಿತ್ಯ.

## ಪರಾಮರ್ಷನ ಗ್ರಂಥಗಳು


೧. ಸಾಯುತಿದೆ ನಿಮ್ಮ ನುಡಿ, ಓ ಕನ್ನಡ ಕಂದರಿರ! ಕೋಗಿಲೆ ಮತ್ತು ಸೋವಿಯಟ್ ರಷ್ಯ
೨. ಅಳುಕದೀ ಕನ್ನಡಂ, ಇಕ್ಷು ಗಂಗೋತ್ರಿ, ಪು.ಸಂ.೫೩

೩. ಮೆಟ್ಟುವ ನೆಲ ಕರ್ನಾಟಕ, ಕೋಗಿಲೆ ಮತ್ತು ಸೋವಿಯಟ್ ರಷ್ಯ
೪. ಮನುಜಮತ–ವಿಶ್ವಪಥ, ಪು.೩೬
೫. ಬಲಾತ್ಕಾರದ ಭಾಷಾ ತ್ರಿಶೂಲ, ಪು.೩–೧೩
೬. ಇಕ್ಷು ಗಂಗೋತ್ರಿ, ಪು.ಸಂ.೫೪–೫೬
೭. ಮನುಜಮತ–ವಿಶ್ವಪಥ, ಪು. ೧೪–೨೬ ಷಷ್ಟಿನಮನ ಕರ್ಣಾಟಕ ಭಾಷಣ
೮. ಮಹಾಕವಿ ಕುವೆಂಪು ದರ್ಶನ, ಪು ೩೮೭–೩೯೪